# ಪ್ರೀತಿಯ ಸ್ಪರ್ಶಕ್ಕೆ ಕೊರಡು ಕೊನರುವುದಯ್ಯಾ...

ವಿಶೇಷ ಕಟ್ಲೆಯಲ್ಲಿ ಎಲ್ಲರ ಜೊತೆ ವೆಂಕಮ್ಮ ಹೆಂಗಸರ ಪಂಕ್ತಿಯಲ್ಲಿ ಕೂತಾಗ ಕನಕ ಅವರಿಗೆ ಕಟ್ಟುನಿಟ್ಟು ಮಾಡಲು ಸಾಧ್ಯವಾಗುತ್ತಿರಲಿಲ್ಲ. ಅಷ್ಟರಮಟ್ಟಿಗೆ ಸ್ವಲ್ಪ ಹಿಂಜರಿಕೆ ಇತ್ತು ಅವಳಿಗೆ. ವೆಂಕಮ್ಮ ಇದೇ ಸಂದರ್ಭ ಉಪಯೋಗಿಸಿಕೊಂಡು ಆಸೆಗೆ ಹೊಟ್ಟೆ ಬಿರಿ ತಿಂದು ತಮ್ಮ ನಾಲಿಗೆ ರುಚಿ ತಣಿಸಿಕೊಳ್ಳುತ್ತಿದ್ದರು. ಅದರ ಪರಿಣಾಮ ಗೊತ್ತಾಗಲು ಮರುದಿನ ಬೆಳಗಿನವರೆಗೆ ಕೂಡಾ ಕಾಯಬೇಕಾಗಿರಲಿಲ್ಲ. ಅರ್ಧರಾತ್ರಿಯಲ್ಲೇ ಹೊಟ್ಟೆ ಗುಡುಗುಡು. ಪುಣ್ಯಕ್ಕೆ ಮುಂಚಿನ ಹಾಗೆ ತಂಬಿಗೆ ಹಿಡಿದುಕೊಂಡು ಹಾಡ್ಯಕ್ಕೆ ಓಡುವ ಪ್ರಮೇಯ ಇರಲಿಲ್ಲ. ಎಲ್ಲಾ ಕಡೆ ಕಕ್ಕಸುಮನೆ ಬಂದಿತ್ತು. ಅಲ್ಲಿಯವರೆಗಾದರೂ ಹೋಗುವಷ್ಟು ತಡೆಯಬೇಕಲ್ಲ? ಕೆಲವು ಸಲ ಸೀರೆಯಲ್ಲೇ ಆಗಿಬಿಡುತ್ತಿತ್ತು. ಕೆಲವು ಸಲ ಹೋಗುವ ದಾರಿಯಲ್ಲಿ. ಬೆಳಿಗ್ಗೆ ಕನಕ ಏಳುವುದರೊಳಗೆ ಎಲ್ಲವನ್ನೂ ಚೊಕ್ಕ ಮಾಡದಿದ್ದರೆ ಅವಳು ಮಾತಲ್ಲೇ ನರಕದರ್ಶನ ಮಾಡಿಸುತ್ತಾಳೆ ಎನ್ನುವ ಅರಿವಿದ್ದ ವೆಂಕಮ್ಮ ವರಸರಿವೆ ತೆಗೆದುಕೊಂಡು ದಾರಿಯಲ್ಲಿ ಬಿದ್ದಿದ್ದನ್ನು ವರೆಸುವ ಪ್ರಯತ್ನ ಮಾಡಿದರೂ ಬಲವಿಲ್ಲದ ಕೈಯಲ್ಲಿ ಎಷ್ಟು ಚೊಕ್ಕ ಆದೀತು? ಬೆಳಕು ಕಂದಿದ ಕಣ್ಣಿಗೆ ಎಷ್ಟು ಬಿದ್ದೀತು?

'ಮೂರು ದಿನ ಉಪಾಸ ಕೆಡಗ್ರೀನಿ ನಿಮ್ಮನ್ನ. ಆಗ ಎಲ್ಲಾ ಸರಿಯಾಗುತ್ತೆ' ಅನ್ನುತ್ತಿದ್ದ ಕನಕ ಹಾಗೆ ಮಾಡಲೂ ಹಿಂಜರಿಯುತ್ತಿರಲಿಲ್ಲ. ರಾತ್ರಿ ಒಂದಕ್ಕೆ ಅವಸರವಾದಾಗಲೂ ಅಷ್ಟೇ. ಬಚ್ಚಲಿಗೆ ಹೋಗುವ ಪುರುಸೊತ್ತಿಲ್ಲದೆ ಎಷ್ಟೋ ಸಲ ದಾರಿಯಲ್ಲಿ ಹನಿ ಹನಿ ಬಿದ್ದು ಬಿಡುತ್ತಿತ್ತು. ನಿದ್ದೆ ತಡೆದು ಅವನ್ನೆಲ್ಲಾ ವರೆಸಿ ತಮಗೆಂದೇ ಮೀಸಲಿಟ್ಟಿದ್ದ ವರಸರಿವೆ ಒಗೆದುಕೊಳ್ಳುತ್ತಿದ್ದರು ವೆಂಕಮ್ಮ. ಅವರು ಮಲಗುವ ಕಡಿಮಾಡಿನ ಕೆಳಗಿನ ಕೋಣೆಯನ್ನು ಅವರೇ ಗುಡಿಸಿ, ವರೆಸಿಕೊಳ್ಳಬೇಕು. ಹಾಸಿಗೆಯ ಮೇಲ್ಹಾಸು ಕೊಡವಿ ಹಾಸಿಕೊಳ್ಳಬೇಕು. ಮೇಲ್ಹಾಸು ಎಂದರೆ ಅವರದ್ದೇ ಒಂದು ಹಳೇ ಸೀರೆ. ಮನೆಯವರೆಲ್ಲರ ಲೇಪಿಗೆ ಬೇಸಿಗೆಯಲ್ಲಿ ಬಿಸಿಲು ಕಾಸುವ ಭಾಗ್ಯ ಸಿಕ್ಕುತ್ತಿತ್ತು. ಹತ್ತಿ ಸರಿದು ಗಂಟು ಕಟ್ಟಿದ್ದಲ್ಲಿ ಅದನ್ನು ಕೋಲಿನಿಂದ ಹೊಡೆದು ಹೊಡೆದು ಸರಿ ಮಾಡಿಡುತ್ತಿದ್ದ ವೆಂಕಟರಾಮು. ಅಮ್ಮನ ಕೋಣೆಗೆ ಅವನು ಹೋಗುವುದನ್ನು ಕನಕ ಸೈರಿಸುತ್ತಿರಲಿಲ್ಲ. 'ಏನಿರುತ್ತೆ ಪಟ್ಟಾಂಗ?' ಎಂದು ಕೊಂಕು ಮಾತಾಡಿ ಕೊನೆಗೆ ವೆಂಕಟರಾಮು ಅಲ್ಲಿಗೆ ತಲೆ ಹಾಕುವುದನ್ನೇ ಬಿಟ್ಟು ಹೊಡೆದ. ವೆಂಕಮ್ಮನ ಬಟ್ಟೆಯಲ್ಲಿ ಮಾತ್ರ ಅಲ್ಲ, ಆ ಕೋಣೆಯೊಳಗೂ ಕಿಟಕಿ ತೆಗೆಯದೆ, ಗಾಳಿ ಆಡದೆ ಕನಗು ವಾಸನೆ. ಯಾರಾದರೂ ಬಂದರೆ ಅವರನ್ನು ಕೋಣೆಯೊಳಗೆ ಹೋಗಗೊಡದೆ ವೆಂಕಮ್ಮನನ್ನೇ ಹೊರಗೆ ಕರೆಯುತ್ತಿದ್ದಳು ಕನಕ. ಅವಳ ಪೈಕಿಯವರಿಗೆ ವೆಂಕಮ್ಮ ಕಸಕ್ಕಿಂತ ಕಡೆಯಾದ ಜೀವ. ಅವರನ್ನು ಮಾತಾಡಿಸಿಕೊಂಡು ಹೋಗಲು ಯಾರೂ ಒಳಗೆ ಬರುತ್ತಿರಲಿಲ್ಲ. ಸಾಡೇಸಾತಿಯಂತೆ ತಮ್ಮ ಬೆನ್ನು ಹತ್ತಿ ಬಂದವರ ಮೇಲೆ ಅವಳಿಗೆ ಸಿಟ್ಟು ಅನ್ನುವುದಕ್ಕಿಂತ ಏನೂ ತರದೆ ಬರಿಗೈಯಲ್ಲಿ ಬಂದಿದ್ದಾರೆಂಬ ಮುನಿಸು. ಮಗಳು ಕಾಣೆಯಾದಳು ಅನ್ನುವುದೇನೋ ನಿಜ. ಯಾರು ಇದ್ದರೂ, ಸತ್ತರೂ ಬದುಕಿರುವವರ ಪಥ ನಡೆಯಬೇಕಲ್ಲ? ನನಗೆ ಸಲ್ಲಬೇಕಾದ್ದು ಕೊಡಿಸಿ ಎಂದು ಪಂಚರೆದುರು ಪಟ್ಟು ಹಿಡಿದು ಕೂರದೆ ಹಿರಿಮಗನಿಗೆ ಎಲ್ಲಾ ನೈವೇದ್ಯ ಮಾಡಿ ಕೈ ಮುಗಿದು ಬಂದವರನ್ನು ಇನ್ನು ಹೇಗೆ ನಡೆಸಿಕೊಳ್ಳಬೇಕು? ಅಥವಾ ತಾವೇ ಯಾಕೆ ನೋಡಿಕೊಳ್ಳಬೇಕು? ಈ ಮನುಷ್ಯ ಒಂದು ಪೆದ್ದು. ಎಲ್ಲಾ ಹೇಳಿ ಹೇಳಿ ತಲೆಗೆ ತುಂಬಿಸಬೇಕು. ಅವತ್ತು ಅತ್ತೆ ತಮ್ಮ ಜೊತೆ ಹೊರಟು ನಿಂತಾಗ ತಾನೇನಾದರೂ ನಕಾರ ಸೂಚಿಸಿದ್ದರೆ ಊರುಮಂದಿಯ ಎದುರು ತಾನು ಕೆಟ್ಟವಳಾಗಬೇಕಿತ್ತು. ಬಾಯಿಗೆ ಕಡುಬು ತುಂಬಿಕೊಂಡಿದ್ದು ದುಬಾರಿಯಾಯ್ತು ಅನಿಸಿರಬಹುದು ಕನಕನಿಗೆ. ಆಡಿದರೆ ವೆಂಕಟರಾಮು ಮಾತಾಡಬೇಕಾಗಿತ್ತು.

'ಅಮ್ಮಂಗೆ ಎಲ್ಲಿದ್ರೇನು? ಆರು ತಿಂಗಳು ಅಲ್ಲಿ, ಆರು ತಿಂಗಳು ಇಲ್ಲಿ ಕಾಲ ಹಾಕಿದ್ರೆ ಆಯ್ತಪ್ಪಾ. ಅವಳ ದಿನ ಕಳಿತ್ತೆ' ಅಂದಿದ್ದರೂ ಸಾಕಿತ್ತು. ಅದನ್ನೂ ಆಡದೆ ಜೊತೆಗೆ ಕಟ್ಟಿಕೊಂಡು ಬಂದ. ಅಮ್ಮ ಅಂದರೆ ಗ್ರಾಸ್ತನಿಗೆ ಪಂಚಪ್ರಾಣ. ಶಿವರಾಮ ಬಾವ ಕೂಡಾ ಇಂಥ ಮಾತಾಡಬಹುದಿತ್ತು. ಅವರು ಯಾಕೆ ಆಡುತ್ತಾರೆ? ಎಲ್ಲಾ ನುಂಗಿ ನೀರು ಕುಡಿದವರಿಗೆ ಅಮ್ಮನನ್ನು ಸಾಕುವ ಹೊರೆಯೂ ತಪ್ಪಿತು ಎಂದು ಖುಷಿಯಾಗಿರಬೇಕು. ಹೋಗಲಿ, ವೆಂಕಮ್ಮ ಸಣ್ಣ ಪುಟ್ಟ ಮನೆಗೆಲಸ ಮಾಡಿಕೊಟ್ಟು ಸಹಾಯ ಮಾಡುತ್ತಾರೆ ಅಂದರೆ ಅದೂ ಇಲ್ಲ. ಕೂತಲ್ಲಿ ಸೇವೆ ಮಾಡಿಸಿಕೊಳ್ಳುವುದು ಹಲ್ಲಿಗೆ ಹತ್ತಿಬಿಟ್ಟಿದೆ. ಮಗಳು ನಾಪತ್ತೆಯಾಗಿದ್ದನ್ನೇ ಹೇಳಿ ಮಾಡಿಕೊಂಡು ಮೂಲೆ ಹಿಡಿದು ಕೂರುವುದನ್ನು ಅಭ್ಯಾಸ ಮಾಡಿಕೊಂಡುಬಿಟ್ಟಿದ್ದಾರೆ ಅನಿಸುತ್ತಿತ್ತೇನೋ ಕನಕನಿಗೆ. ಅವಳ ತಲೆಯಲ್ಲಿ ಇಂಥಾ ಯೋಚನೆಗಳಲ್ಲದೆ ಬೇರೆ ಸುಳಿದಿರಲು ಸಾಧ್ಯವಿಲ್ಲ ಎಂದು ಅತ್ತೆಯ ಪರಿಸ್ಥಿತಿ ನೋಡುತ್ತಿದ್ದಂತೆ ಅಂದಾಜು ಮಾಡಿಬಿಟ್ಟಿದ್ದಳು ಸೀತಾಲಕ್ಷ್ಮಿ.

ಗಂಡ, ಮಕ್ಕಳನ್ನು ಹೊರತುಪಡಿಸಿ ಉಳಿದ ಗಂಡನ ಪೈಕಿಯವರೆಲ್ಲಾ ಕೆಲವರಿಗೆ ಕೈಂಯಾಗಿಬಿಡುತ್ತಾರೆ. ಇದಕ್ಕೆ ಸಕಾರಣ ಬೇಕೆಂದೇನೂ ಇಲ್ಲ. ಕಾರಣವಿದ್ದರಂತೂ ಸರಿಯೇ ಸರಿ. ಅದರಲ್ಲೂ ಕೈಲಿ ಕೂಡದವರು, ವಯಸ್ಸಾದವರು, ಮೂರುಕಾಸಿನ ಬೆಲೆ ಬಾಳದವರು ಅಂದರೆ ಮತ್ತಷ್ಟು ಹೀನಾಯ. ಕೂಡುಕುಟುಂಬದ ಕೆಲವರ ಮನೆಯ ಕತೆ ಗೊತ್ತಿದೆ ಸೀತಾಲಕ್ಷ್ಮಿಗೆ. ಚಟ್ನಿ ಅರೆದರೆ ಗಟ್ಟಿ ಮುದ್ದೆಯನ್ನು ವರಳುಕಲ್ಲಿನಲ್ಲಿ ಗಂಡನಿಗೆಂದು ಮುಚ್ಚಿಟ್ಟು, ಮೇಲೆ ರುಬ್ಬುವ ಗುಂಡು ಅಡ್ಡ ಇಟ್ಟು, ಕಾಣದಂತೆ ಮಾಡುವುದು, ಬಡಿಸಲು ಹೋದರೆ ಗಂಡನಿಗೆ, ಬೇಕಾದವರಿಗೆ ಹುಳಿಪಾತ್ರೆಯ ಬುಡಕ್ಕೆ ಹೋಗಿ ತರಕಾರಿ ಹೋಳುಗಳನ್ನು ತುಂಬಿ ತರುತ್ತದೆ ಸೌಟು. ಉಳಿದವರಿಗಾದರೆ ಮೇಲೆ ಮೇಲೆ ಆಡುತ್ತದೆ. ಹಾಲು, ಮೊಸರು, ತುಪ್ಪ ಎಲ್ಲದರಲ್ಲೂ ತಮಗೆ ಬೇಕಾದವರಿಗೆ ಹಿರಿ ಪಾಲು. ಇಂತಹ ಪಕ್ಷಪಾತ ಬುದ್ಧಿಯಿಂದ ಅವರು ಪಡೆದುಕೊಳ್ಳುವುದು ಅಷ್ಟರಲ್ಲೇ ಇದೆ. ಆದರೂ ಕುಂಯ್ಯು ಬುದ್ಧಿ. ಮಕ್ಕಳುಮರಿ ಆಗುವವರೆಗೆ ಕನಕ ಇಲ್ಲೇ ತಳವೂರಿದ್ದರೆ ಈ ಮನೆಯಲ್ಲೂ ಹೀಗಾಗುತ್ತಿತ್ತು ಎನ್ನುವ ಕುರಿತು ಸೀತಾಲಕ್ಷ್ಮಿಗೆ ಅನುಮಾನವಿಲ್ಲ. ಮನೆಗೆ ನಾಪಿತ ಬಂದು ವೆಂಕಮ್ಮ ತಲೆ ನುಣ್ಣಗೆ ಮಾಡಿಸಿಕೊಂಡ ದಿನ ಅವರು ಹಂಡೆ ಮುಟ್ಟುವಂತಿಲ್ಲ. ಮೈಲಿಗೆ. ಗಂಡ, ಮಕ್ಕಳ ಸೇವೆ ಕನಕ ಮಾಡುತ್ತಾಳೆ. ವೆಂಕಮ್ಮನ ತಲೆಯ ಮೇಲೆ ನಾಲ್ಕು ಚೊಂಬು ಗೋಮಯ ಕದರಿದ ನೀರು ಹಾಕಿ, ಉಟ್ಟ ಬಟ್ಟೆ ಒದ್ದೆಯಾಗುವಂತೆ ನೋಡಿಕೊಂಡು, ಬಚ್ಚಲುಮನೆಯಿಂದ ಹೊರಗೆ ದಾಟುವವನು ವೆಂಕಟರಾಮು. ಅಮ್ಮನ ಮೂಳೆಚಕ್ಕಳದ ಮೈ ನೋಡಿ ಅವನಿಗೆ ಕನಿಕರ ಹುಟ್ಟುತ್ತಿತ್ತಂತೆ.

'ಹೆಂಗಾಗಿದ್ಯೇ ಮಾರಾಯ್ತೀ? ಹೊಟ್ಟೆ ತುಂಬಾ ಉಣ್ಣಲ್ವೇನೇ?' ಎನ್ನುತ್ತಿದ್ದನಂತೆ ವೆಂಕಟರಾಮು. ಮಗ ಅಯ್ಯೋ... ಅನ್ನುವಾಗ ವೆಂಕಮ್ಮನ ಕಣ್ಣಿಂದ ವಸರಿದ ನೀರು ತಲೆಯ ಮೇಲೆ ಬಿದ್ದ ನೀರಿನೊಂದಿಗೆ ಕಲೆಸಿ ಹೋಗುತ್ತಿತ್ತು. ಸಾಕು, ಇಷ್ಟು ಸಾಕು. ನನ್ನ ಮಗ ಅಂದರೆ ಅಪರಂಜಿ. ಹೆಂಡತಿಯ ಕೈಲಿ ಸಿಕ್ಕಿಕೊಂಡು ಅವಳು ಹೇಳಿದಂತೆ ಕುಣಿಯುತ್ತಾನೇ ವಿನಾ ಇಲ್ಲದಿದ್ದರೆ ತನ್ನನ್ನು ಕಣ್ಣಗೊಂಬೆಯಂತೆ ಜೋಪಾನ ಮಾಡುತ್ತಿದ್ದ ಈಗಲೂ ಅವನಿಗೆ ತನ್ನ ಮೇಲೆ ಪ್ರೀತಿ ಉಂಟು ಅಂದುಕೊಳ್ಳುತ್ತಿದ್ದರಂತೆ ವೆಂಕಮ್ಮ. ಈ ಮನೆ ಸೇರಿಕೊಂಡು ಸ್ವಲ್ಪ ಸುಧಾರಿಸಿಕೊಂಡ ಮೇಲೆ, ಮಾತಾಡುವ ಶಕ್ತಿ ಮರುಕಳಿಸಿದ ಮೇಲೆ, ಹೀಗೆ ಮಾತಾಡಿದರೆ

